ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆ ಬಹಳ ಉತ್ತಮವಾದುದು, ಆದ್ದರಿಂದ ಅವರ ಸಲಹೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ.

ಶ್ರೀ ಎನ್. ತಿಪ್ಪಸ್ವಾಮಿಗೌಡ —ವಯಸ್ಕರ ಶಿಕ್ಷಣ ವ್ಯವಸ್ಥೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಅನೇಕ ವರ್ಷಗಳಿಂದಲೂ ಜಾರಿಯಲ್ಲಿದೆ. ಶಿಕ್ಷಣ ಇಲ್ಲದಿರತಕ್ಕ ವಯಸ್ಕರ ಸಂಖ್ಯೆ ಕಡಿಮೆ ಏನೂ ಆಗುತ್ತಿಲ್ಲ. ದಿನೇ ದಿನೇ ಜಾಸ್ತಿಯಾಗುತ್ತಿದೆ. ಕಡ್ಡಾಯ ಶಿಕ್ಷಣ ಜಾರಿಯಲ್ಲಿದ್ದರೂ ಕೂಡ ಶೇಕಡ ೨೫ ರಿಂದ ೨೭ ಪರ್ಸೆಂಟ್‌ನಷ್ಟು ಮಕ್ಕಳು ಶಾಲೆಗೆ ಸರಿಯಾಗಿ ಹೋಗುತ್ತಿಲ್ಲ. ಇಂಥ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗಳಿಗೆ ಹೋಗುವಂತೆ ಕಡ್ಡಾಯ ಮಾಡದೇ ಇರುವುದರಿಂದ ಅನಕ್ಷರಸ್ಥರ ಸಂಖ್ಯೆ ಜಾಸ್ತಿಯಾಗುತ್ತಿದೆ ಎಂಬುದನ್ನು ಮಾನ್ಯ ವಿದ್ಯಾ ಮಂತ್ರಿಗಳು ತಿಳಿದು ಇದನ್ನು ಸರಿಪಡಿಸುವುದಕ್ಕೆ ಏನಾದರೂ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆಯೇ? ಎಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ —ಇದು ಅಡಲ್ಟ್ ಎಜುಕೇಷನ್ ಅಲ್ಲ, ಮೂಲ್ ಎಜುಕೇಷನ್ ಮಾನ್ಯ ಸದಸ್ಯರು ಕೇವಲ ಮುದುಕರ ಬಗ್ಗೆಯೇ ಪ್ರಶ್ನೆ ಮಾಡುತ್ತಿದ್ದಾರೆ. ಇದು ನ್ಯಾಷನಲ್ ಲಿಟ್ರೆಸಿ ಪ್ರೋಗ್ರಾಂ. ಇವತ್ತು ಶಾಲೆಗೆ ಹೋಗತಕ್ಕ ಮಕ್ಕಳ ಪೈಕಿ ಸುಮಾರು ೬೦–೭೦ ಪರ್ಸೆಂಟ್ ಡ್ರಾಪ್‌ಔಟ್ ಆಗುತ್ತಿದ್ದಾರೆ. ೨–೩ ವರ್ಷ ಆದಮೇಲೆ ಇವರೆಲ್ಲರೂ ಅನಕ್ಷರಸ್ಥರಾಗ ತ್ತಾರೆ. ಇದು ಬಹಳ ದೊಡ್ಡ ಪ್ರಮಾಣದ್ದಾಗಿರುವುದರಿಂದ ಇದರ ಬಗ್ಗೆ ವ್ಯವಸ್ಥಿತವಾಗಿ ವಿಚಾರ ಮಾಡಿ ಸರ್ಕಾರ ತೀವ್ರ ಗಮನಹರಿಸಬೇಕಾಗುತ್ತದೆ.

(ಚುಪ್ರ. ೧೧೩ ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಾಥಮಿಕ ಶಾಲಾ ಪಠ್ಯ ಪುಸ್ತಕಗಳ ಮುದ್ರಣ

೧೧೯. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು ಕ್ರೀಡೆಗಳು, ಕನ್ನಡ ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈ ಶಿಕ್ಷಣ ವರ್ಷದಲ್ಲಿ ಪ್ರಾಥಮಿಕ ಶಾಲೆಗಳ ಪಠ್ಯ ಪುಸ್ತಕಗಳ ಮುದ್ರಣ ಹಾಗೂ ಸರಬರಾಜು ತಡವಾಗಿರುವ್ದದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ತಡವಾಗಲು ಕಾರಣಗಳೇನು ?

ಇ) ಸರ್ಕಾರವು ಇದನ್ನು ಸರಿಪಡಿಸಲು ಕೈಗೊಂಡ ಕ್ರಮಗಳೇನು ?

ಶ್ರೀ ಕೆ. ಹೆಚ್, ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ೧. ೧೯೮೮ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿನ ಪುನಃ ಪರಿಶೀಲನೆ ಹಾಗೂ ಬದಲಾವಣೆ ತರಲು ಕೇಂದ್ರ ಸರ್ಕಾರ ಉದ್ದೇಶಿಸಿರುವುದರಿಂದ ವಿಳಂಬವಾಗಿದೆ.

೨. ಮೆ. ಹಿಂದೂಸ್ಥಾನ್ ಪೇಪರ್ ಕಾರ್ಪೋರೇಷನ್‌ನವರು ರಾಜ್ಯಕ್ಕೆ ಸರಬರಾಜಲ್ಲಿ ರಿಯಾಯ್ತಿ ದರದ ಬಿಳಿ ಕಾಗದ ಹೆಚ್ಚಿಕೆ ಮಾಡಿಲ್ಲವಾದ್ದರಿಂದ ವಿಳಂಬವಾಗಿದೆ.

ಇ) ೧೯೯೨–೯೩ನೇ ಸಾಲಿಗೆ ಬಹಳ ಪಠ್ಯ ಪುಸ್ತಕ ಮಾಳಿಗೆಯಲ್ಲಿ ಲಭ್ಯವಿದ್ದ ಶೇಕಡ ೪೫ ರಷ್ಟು ಪಠ್ಯ ಪುಸ್ತಕಗಳನ್ನು ವಿತರಿಸಲಾಗುವುದು. ಪಠ್ಯ ಪುಸ್ತಕಗಳ ಮುದ್ರಣಕ್ಕಾಗಿ ೨೮೦೦ ಮೆಟ್ರಿಕ್ ಟನ್ ಬಿಳಿ ಮುದ್ರಣ ಕಾಗದವನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಲಾಗಿದ್ದು ಜೇಡಿಕೆಗಳಿಗನುಸಾರವಾಗಿ ಪಠ್ಯ ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲಾಗುವುದು. ಮುದ್ರಣ ಕಾರ್ಯವನ್ನು ಎಲ್ಲಾ ಸರ್ಕಾರಿ ಮುದ್ರಣಾಲಯಗಳಲ್ಲಿ ಮೈಸೂರು, ಬೆಂಗಳೂರು, ಧಾರವಾಡ, ಮಡಿಕೇರಿ, ಗುಲ್ಬರ್ಗ ಹಾಗೂ ೮೦ ಖಾಸಗಿ ಮುದ್ರಣಾಲಯಗಳಿಗೆ ಮುದ್ರಣ ಕಾರ್ಯವನ್ನು ವಹಿಸಲಾಗಿದೆ.

ಶ್ರೀ ಪಿ. ಜಿ ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ೧೯೮೮ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿನ ಪುನಃ ಪರಿಶೀಲನೆ ಹಾಗೂ ಬದಲಾವಣೆ ತರಲು ಕೇಂದ್ರ ಸರ್ಕಾರ ಉದ್ದೇಶಿಸಿರುವುದರಿಂದ ಈ ಪಠ್ಯ ಪುಸ್ತಕಗಳ ಮುದ್ರಣ ಕಾರ್ಯ ಕಡಮಾಯಿತು ಎಂದು ಮಾನ್ಯ ಶಿಕ್ಷಣ ಮಂತ್ರಿಗಳು ಹೇಳಿದ್ದಾರೆ. ಆದರೆ ಇದರ ಅರ್ಥ ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಮಂತ್ರಿಗಳು ಕಳೆದ ೬ ತಿಂಗಳಿಂದ ಈ ಇಲಾಖೆಯ ಮಂತ್ರಿಗಳಾಗಿದ್ದಾರೆ, ಅಲ್ಲದೆ ಅವರು ಹಿರಿಯ ಹಾಗೂ ಒಳ್ಳೆಯ ಅನುಭವಸ್ಥರಾಗಿದ್ದಾರೆ

ಈ ಪೇಪರ್ ಪಾರ್ಟೀಜ್ ಎಂಬುದು ಕೇವಲ ಇವತ್ತಿನದೇನೂ ಅಲ್ಲ, ಬಹಳ ಹಿಂದಿನಿಂದಲೂ ಈರೀತಿ ಕೊರತೆ ಇದ್ದೇ ಇದೆ. ಜೂನ್ ತಿಂಗಳಲ್ಲಿ ಪ್ರೈಮರಿ ಸ್ಕೂಲ್ ಮತ್ತು ಮಿಡಲ್ ಸ್ಕೂಲ್‌ಗಳು ಪ್ರಾರಂಭವಾಗುತ್ತವೆಂಬ ಅಂಶ ಇವರಿಗೆ ಗೊತ್ತಿರಲಿಲ್ಲವೆ ? ಒಂದು ವೇಳೆ ಗೊತ್ತಿದ್ದರೂ ಈ ತೊಂದರೆಯನ್ನು ನಿವಾರಿಸಲು ಏನು ಮಾಡಬೇಕೆಂದು ಅವರಿಗೆ ಗೊತ್ತಾಗಲಿಲ್ಲವೆ ? ಇನ್ನು ೧೦ ದಿನದೊಳಗೆ ಈ ಸಮಸ್ಯೆಯನ್ನು ಸರಿಪಡಿಸುತ್ತೇವೆಂದು ಇವತ್ತು ಮಾನ್ಯ ಶಿಕ್ಷಣ ಮಂತ್ರಿಗಳಂ ಈ ಸದನದಲ್ಲಿ ಒಂದಂ ಹೇಳಿಕೆ ಕೊಟ್ಟಿದ್ದಾರೆ. ಆದರೆ ಇದು ಅವರಿಂದ ಸಾಧ್ಯವೆ ? ಎಂದು ನಾನು ಕೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಕೇಂದ್ರ ಸರ್ಕಾರದ ಈ ಹೊಸಧೋರಣೆ ಮೊನ್ನೆ ತಾನೆ ಬಂದಿದ್ದರಿಂದ ನಾವು ಈಗ ೩ ಮತ್ತು ೮ನೇ ತರಗತಿಯ ಪಠ್ಯಪುಸ್ತಕಗಳನ್ನು ಪ್ರಿಂಟ್ ಮಾಡಿಸಲು ಕೊಡಬೇಕಾಗಿದೆ. ಈಗ ಪುಸ್ತಕಗಳನ್ನು ಪ್ರಿಂಟ್ ಮಾಡಿದರೆ ನಮಗೆ ಸ್ವಲ್ಪಮಟ್ಟಿಗೆ ನಷ್ಟವಾಗುತ್ತದೆಂಬ ದೃಷ್ಟಿಯಿಂದ ಈ ಕಾರ್ಯವನ್ನು ಕೈಬಿಡಬೇಕಾಗಿ ಬಂತು. ಈ ಪುಸ್ತಕಗಳನ್ನು ಪಿಂಟ್ ಮಾಡಬಾರದೆಂಬ ಆದೇಶವನ್ನು ನಾವು ಕಳೆದ ಮೇ ತಿಂಗಳಲ್ಲಿ ಕೊಟ್ಟಿದ್ದು. ನಮಗೆ ಮೆ: ಹಿಂದೂಸ್ತಾನ್ ಪೇಪರ್ ಕಾರ್ಪೊರೇಷನ್ ನವರು ನಮಗೆ ಸಕಾಲದಲ್ಲಿ ಪೇಪರನ್ನು ಒದಗಿಸಲಿಲ್ಲ. ನಾವು ಅವರಿಗೆ ಏನು ಹಣವನ್ನು ಕೊಡಬೇಕಾಗಿತ್ತೋ ಅದನ್ನು ಕೊಟ್ಟಿದ್ದೇವೆ.

ಸರ್ಕಾರದವರು ಹಣವನ್ನು ಕಳುಹಿಸಿಕೊಟ್ಟಿದ್ದಾರೆ, ಆದರೆ ಅವರು ಪೇಪರ್ ಕೊಡುತ್ತಿಲ್ಲ, ಹೀಗಾಗಿ ಅನಿವಾರ್ಯವಾಗಿ ಮೊನ್ನೆ ಸರ್ಕಾರದವರು ಓಪನ್ ಮಾರ್ಕೆಟ್‌ನಲ್ಲಿ ೧೮೦ಕ್ಕೆ ೧೮೮ರಷ್ಟು ಹಣವನ್ನು ಖರ್ಚುಮಾಡಿ ಪೇಪರ್ ಕೊಂಡುಕೊಂಡು ಪ್ರಿಂಟ್ ಮಾಡತಕ್ಕಂಥ ಪರಿಸ್ಥಿತಿಗೆ ತಳ್ಳಲ್ಪಟ್ಟಿದೆ. ಆದ್ದರಿಂದ ಮೊನ್ನೆ ಮೇ ತಿಂಗಳಲ್ಲಿ ಈ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರ ಸಂದೇಹ ಏನಿದೆ ಅಂದರೆ ಪುಸ್ತಕಗಳನ್ನು ಒದಗಿಸಲಿಕ್ಕೆ ಆಗುತ್ತದೋ ಇಲ್ಲವೋ ಎಂದು, ಅದಕ್ಕೆ ಸಕಾರಣವಿಲ್ಲ. ಏತಕ್ಕಂದರೆ ಈ ದಿಸೆಯಲ್ಲಿ ಸರ್ಕಾರ ತ್ವರಿತಗತಿಯಿಂದ ಕೆಲಸ ಮಾಡುತ್ತಿದೆ. ಆದ್ದರಿಂದ ಮಾನ್ಯ ಸದಸ್ಯರಿಗೆ ಗಮನಕ್ಕೆ ನಾನು ತರುತ್ತಿರುವುದೇನೆಂದರೆ, ನಮ್ಮಲ್ಲಿ ಸುಮಾರು ೪೫ಪರ್ಸೆಂಟ್ ಹಳೆ ಸ್ಟಾಕ್ ಏನು ಇದೆ. ಅದನ್ನು ಹೊರಗಡೆ ಬಿಡುತ್ತಿದ್ದೇವೆ. ಬಾಕಿ ಸುಮಾರು ಒಂದು ಕೋಟಿ ಎಪ್ಪತ್ತೈದು ಲಕ್ಷದಷ್ಟು ಪುಸ್ತಕಗಳನ್ನು ಪ್ರಿಂಟ್ ಮಾಡಬೇಕಾಗಿದೆ. ಅದನ್ನು ಸಹ ಇಷ್ಟರಲ್ಲಿಯೇ ಒದಗಿಸುತ್ತಿದ್ದೇವೆ. ಹೀಗಾಗಿ ಕನ್ನಡ, ಸೈನ್ಸ್ ೧ ಲಕ್ಷ ೪೪ ಸಾವಿರ ಪುಸ್ತಕಗಳು ನಮಗೆ ಬೇಕಾದರೆ ೧ ಲಕ್ಷ ೪೪ ಸಾವಿರ ಪ್ರಿಂಟ್ ಆಗಿದೆ. ಬೈಂಡಿಂಗ್‌ನಲ್ಲಿ ೫೪ ಸಾವಿರ ಇದೆ. ೯೦ ಸಾವಿರ ಡಿಸ್‌ಪ್ಯಾಚ್ ಆಗಿದೆ. ಇದೆಲ್ಲದರ ಅಂಕಿಸಂಖ್ಯೆಗಳನ್ನು ಕೊಡುತ್ತೇನೆ. ಇಂಗ್ಲೀಷ್ ಸೈನ್ಸ್ ೨೭ ಸಾವಿರ ನಮಗೆ ಬೇಕಾದರೆ ೨೭ ಸಾವಿರ ಪ್ರಿಂಟಿಂಗ್ ಆಗಿದೆ ಇದರಲ್ಲಿ ೧೨ ಸಾವಿರ ಬೈಂಡಿಂಗ್‌ನಲ್ಲಿದೆ. ೧೫ ಸಾವಿರ ಡಿಸ್‌ಪ್ಯಾಚ್ ಆಗುತ್ತಿದೆ. ಸಂಸ್ಕೃತ ಪುಸ್ತಕಗಳು ಸಹ ಡಿಸ್‌ಪ್ಯಾಚ್ ಆಗುತ್ತಿದೆ. ಮ್ಯಾಥೆಮೆಟಿಕ್ಸ್ ಪಠ್ಯ ಪುಸ್ತಕಗಳು ಬೇಕಾಗಿರುವುದು ೯೫ ಸಾವಿರ ಬೇಕಾಗಿತ್ತು. ಇದರಲ್ಲಿ ೯೦ ಸಾವಿರ ಪ್ರಿಂಟ್ ಆಗಿದೆ. ೫೦ ಸಾವಿರ ಬೈಂಡಿಂಗ್ ಆಗಿದೆ. ೪೦ ಸಾವಿರ ಡಿಸ್‌ಪ್ಯಾಚ್‌ನಲ್ಲಿದೆ. ಕನ್ನಡ ಮೂರನೆ ತರಗತಿಯದ್ದು ೧ ಲಕ್ಷ ೮೨ ಸಾವಿರ ಪ್ರಿಂಟಿಂಗ್ ಆಗಿದೆ. ೧ ಲಕ್ಷದ ೪೨ ಸಾವಿರ ಬೈಂಡಿಂಗ್‌ನಲ್ಲಿದೆ, ೪೦ ಸಾವಿರ ಡಿಸ್‌ಪ್ಯಾಚ್‌ನಲ್ಲಿದೆ. ಇನ್ನು ಕನ್ನಡ ಎನ್.ಡಿ.ಟಿ. ೮ನೇ ಸ್ಟಾಂಡರ್ಡ್‌ನದು ೯೦ ಸಾವಿರ ಪ್ರಿಂಟ್ ಆಗಿದೆ. ೪೦ ಸಾವಿರ ಬೈಂಡಿಂಗ್‌ನಲ್ಲಿದೆ ೫೦ ಸಾವಿರ ಡಿಸ್‌ಪ್ಯಾಚ್‌ನಲ್ಲಿದೆ. ಹೀಗೆ ನಾನಾ ಹಂತದಲ್ಲಿರುವುದರಿಂದ ಮಾನ್ಯ ಸದಸ್ಯರ ಸಂದೇಹ ಅಥವಾ ಕಳಕಳಿ ಏನಿದೆ, ಅದಕ್ಕೆ ಆಧಾರವಿಲ್ಲ. ಅತಿ ಶೀಘ್ರವಾಗಿ ಈ ವ್ಯವಸ್ಥೆ ಏನು ಇದೆ ಅದನ್ನು ಸರ್ಕಾರ ಮಾಡುತ್ತದೆ. ಇದಲ್ಲದೆ ಮೇಲಿಂದ ಮೇಲೆ ಪತ್ರಿಕೆಗಳಲ್ಲಿ ಈ ವಿಚಾರ ಬರುತ್ತಿದೆ. ಮೊನ್ನೆ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿಯೂ ಮಕ್ಕಳು ಮತ್ತು ಅವರ ತಂದೆ ತಾಯಿಗಳು ಪುಸ್ತಕಕ್ಕಾಗಿ ಕ್ಯೂ ನಿಂತಿರುವುದನ್ನು ನೋಡಿದೆ. ಆದ್ದರಿಂದ ಸರ್ಕಾರ ಇದನ್ನು ತೀವ್ರಗತಿಯಿಂದ ಪರಿಗಣಿಸಿ ಈ ಕೆಲಸವನ್ನು ಅದಷ್ಟು ಜಾಗ್ರತೆಯಾಗಿ ಮಾಡಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಇಡಿ ರಾಜ್ಯದಲ್ಲಿ ಪೋಷಕರಿಗೆ ಬಹಳ ಗೊಂದಲ ಉಂಟಾಗಿರುವುದರಿಂದ ಲಕ್ಷಾಂತರ ಮಕ್ಕಳು ಇದರ ಬಗ್ಗೆ ಆತಂಕಕ್ಕೆ ಒಳಗಾಗಿದ್ದಾರೆ. ಆದ್ದರಿಂದ ನಮಗೆ ಇದನ್ನು ಇನ್ನೂ ಹೆಚ್ಚು ಗೊಂದಲವನ್ನು ಉಂಟುಮಾಡತಕ್ಕಂಥ ಉದ್ದೇಶವಿಲ್ಲ. ಈಗ ಪ್ರಶ್ನೆ ಏನೆಂದರೆ ಈ ಸಮಸ್ಯೆಗೆ ಅದಷ್ಟು ಜಾಗ್ರತೆ ಪರಿಹಾರವನ್ನು ಒದಗಿಸಬೇಕೆಂದು ಈ ವಿಚಾರವನ್ನು ನಾನು ಸದನದಲ್ಲಿ ಸ್ಪಷ್ಟಪಡಿಸಿ ಮಾಡಿತ್ತಿರುವುದು. ಮಾನ್ಯ ಮಂತ್ರಿಗಳಲ್ಲಿ ಒಂದು ಪ್ರಶ್ನೆಯನ್ನು ಕೇಳಬಯಸುವುದೇನೆಂದರೆ. ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಮಾನರು ಮತ್ತು ಎಂಟನೇ ಕ್ಲಾಸ್‌ಗಳ ಸಿಲಬಸ್ ಚೇಂಜ್ ಆಗಿರುವುದಾಗಿ ಕೇಳಿಬಂದಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಆಗಿಲ್ಲ.

ಶ್ರೀ ಪಿ.ಜಿ. ಆರ್. ಸಿಂಧ್ಯ.—ಹಾಗಾದರೆ ಮೂರು ಮತ್ತು ಎಂಟನೇ ತರಗತಿಗಳಿಗೆ ಪ್ರಿಂಟ್ ಆಗಿರ ತಕ್ಕಂಥ ಎಲ್ಲ ಪುಸ್ತಕಗಳು ಹೊಸ ಸಿಲಬಸ್ ಆಗಿದೆಯೋಅಥವಾ ಹಳೆಯಸಿಲಬಸ್ ಆಗಿದೆಯೋಎಂಬುದು ಒಂದು, ಎರಡನೆಯದಾಗಿ ಇನ್ನು ಎಷ್ಟು ದಿವಸಗಳಲ್ಲಿ ಪ್ರಿಂಟಿಂಗ್ ಕೆಲಸ ಮುಗಿಯುತ್ತದೆ ? ಮತ್ತು ಮುಖ್ಯವಾಗಿ ಪ್ರಿಂಟ್ ಆಗಿರತಕ್ಕಂಥ ಪುಸ್ತಕಗಳು ಸರಿಯಾಗಿ ವಿತರಣೆಯಾಗುತ್ತದೆಯೇ ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಕೊನೆಪಕ್ಷ ಪರೀಕ್ಷೆಗೆ ೩೦ ದಿವಸಗಳ ಮುಂಚಿತವಾಗಿ ಈ ಪುಸ್ತಕ ಗಳನ್ನು ವಿತರಣೆ ಮಾಡಲಿಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ?

ಶ್ರೀ ಕೆ. ಹೆಚ್. ರಂಗನಾಥ್.—ಮೂರು ಮತ್ತು ಎಂಟನೆ ತರಗತಿಗಳಿಗೆ ಹಳೇ ಸಿಲಬಸ್ ಪುಸ್ತಕ ಗಳನ್ನೇ ಕಳುಹಿಸಿಕೊಡಲಾಗುತ್ತದೆ. ಹೊಸ ಸಿಲಬಸ್ ಜಾರಿಗೊಳಿಸಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಇದರ ಬಗ್ಗೆ ಹೆಚ್ಚು ಕಳವಳವನ್ನು ಪಡಬೇಕಾಗಿಲ್ಲ. ಪುಸ್ತಕಗಳ ವಿಚಾರದಲ್ಲಿ ವ್ಯಾಪಕವಾಗಿ ಕಾರ್ಯ ಕ್ರಮವನ್ನು ಹಮ್ಮಿಕೊಂಡಿದ್ದೇವೆ. ಏತಕ್ಕೆಂದರೆ ಸರ್ಕಾರದವರು ಎರಡು ಪ್ರಿಂಟಿಂಗ್ ಪ್ರೆಸ್‌ಗಳಲ್ಲಿ ಅಂದರೆ ಮೈಸೂರು ಮತ್ತು ಬೆಂಗಳೂರು ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮಾತ್ರ ಮೊದಲು ಪ್ರಿಂಟಿಂಗ್ ಆಗುತ್ತಿತ್ತು. ಆದರೆ ಈಗ ಎಲ್ಲ ಪ್ರಿಂಟಿಂಗ್ ಪ್ರೆಸ್‌ಗಳಲ್ಲಿ ಪ್ರಿಂಟ್ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಅದರ ಜೊತೆಗೆ ೮೫ ಖಾಸಗಿ ಪ್ರಿಂಟಿಂಗ್ ಪ್ರೆಸ್‌ಗಳಲ್ಲಿಯೂ ಕೂಡ ಪ್ರಿಂಟಿಂಗ್ ಮಾಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಮತ್ತೆ ಎರಡು ಸಾವಿರ ಟನ್ ಕಾಗದವನ್ನು ನಾವು ನೂರಕ್ಕೆ ನೂರು ಬೆಲೆಯನ್ನು ಕೊಟ್ಟು ಕೊಂಡುಕೊಳ್ಳತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಮತ್ತೆ ಅರ್ಥ ಮಂತ್ರಿಗಳು ಅದಕ್ಕೆ ಹಣವನ್ನು ಬಿಡುಗಡೆ ಮಾಡಿದ್ದಾರೆ, ಎಂ.ಪಿ.ಎಂ. ನವರು ಏನು ಪೇಪರ್ ತಯಾರು ಮಾಡುತ್ತಾರೆ, ಅಲ್ಲಿಂದ ನೇರವಾಗಿ ಪ್ರಿಂಟಿಂಗ್ ಪ್ರೆಸ್‌ಗೆ ಬರುತ್ತದೆ, ಅಲ್ಲಿ ವಿತರಣೆ ಯಾಗುತ್ತದೆ. ಇದರಿಂದ ಮಾನ್ಯ ಸದಸ್ಯರ ಶಂಕೆ ಏನಿದೆ, ಪರೀಕ್ಷೆ ಇನ್ನು ೩೦ ದಿವಸ ಇದ್ದಾಗಲಾದರೂ ಪಠ್ಯ ಪುಸ್ತಕಗಳು ಹೊರಬರಲಿ ಎಂದು ಏನು ಹೇಳಿದ್ದಾರೆ, ಅದು ಬೇಡ. ನೀವು ಮತ್ತೆ ಈ ಪ್ರಶ್ನೆ ಯನ್ನು ಜುಲೈಯಲ್ಲಿ ಕೇಳುವುದಕ್ಕೆ ಅವಕಾಶ ಇಲ್ಲದ ಹಾಗೆ ನಾನು ವ್ಯವಸ್ಥೆ ಮಾಡುತ್ತೇನೆ, ನೀವು ಇದರ ಬಗ್ಗೆ ಜುಲೈಯಲ್ಲಿ ಪ್ರಶ್ನೆ ಕೇಳುವುದಕ್ಕೆ ಅವಕಾಶ ಆಗಬಾರದು, ಹಾಗೆ ವ್ಯವಸ್ಥೆ ಮಾಡಿಕೊಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ಸದನ ಮುಗಿಯುವುದರೊಳಗಾಗಿ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಿಗೂ ತಾವು ಕಳುಹಿಸಿಕೊಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಜುಲೈಯಲ್ಲಿ ಮಾನ್ಯ ಸದಸ್ಯರು ಪ್ರಶ್ನೆ ಕೇಳದೇ ಇರತಕ್ಕಂಥ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹಾಗಿದ್ದರೆ ತಮಗೆ ಕಂಗ್ರಾಜುಲೇಟ್ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಜುಲೈಯಲ್ಲಿ ಅಸೆಂಬ್ಲೀನೆ ಇರುವುದಿಲ್ಲವಲ್ಲ.

ಅಧ್ಯಕ್ಷರು.—ಮಾನ್ಯ ಕೆ. ಹೆಚ್. ರಂಗನಾಥ್ ಅವರು ಇಸವಿಯನ್ನೇ ಹೇಳಿಲ್ಲವಲ್ಲ.

ಅಧ್ಯಕ್ಷರು.—ಶ್ರೀ ಎ. ಟಿ. ರಾಮಸ್ವಾಮಿಯವರು ಗೈರುಹಾಜರಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಲ್ಲಿ ಅಭಿವೃದ್ಧಿಗೊಳಿಸಿದ ಕೊಳಚೆ ಪ್ರದೇಶಗಳು

೨೨. ಶ್ರೀ ಪೆರಿಕಲ್ ಎಂ. ಮಂಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿರುವ ಕೊಳಚೆ ಪ್ರದೇಶಗಳ ಹೆಸರು.

೨ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ೧೯೮೮-೮೯ ಮತ್ತು ೧೯೮೯-೯೦ರಲ್ಲಿ ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿ ಯೋಜನೆಯಲ್ಲಿ ಅಭಿವೃದ್ಧಿಗೊಳಿಸಿದ ಕೊಳಚೆ ಪ್ರದೇಶಗಳ ಹೆಸರುಗಳೇನು ?

೩ ಕೊಳಚೆ ಪ್ರದೇಶದ ಅಭಿವೃದ್ಧಿ ಯೋಜನೆಯಲ್ಲಿ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಮೇಲಿನ ಕೊಳಚೆ ಪ್ರದೇಶಗಳಿಗೆ ೮೮-೮೯ ಮತ್ತು ೮೯-೯೦ರಲ್ಲಿ ಖರ್ಚು ಮಾಡಿದ ಹಣವೆಷ್ಟು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧ ೦ ಅಶ್ವತ್ಥನಗರ ಮತ್ತು ಸಿದ್ಧಲಿಂಗನಗರ